ಪರಿಶೀಲಿಸಿ ಅರ್ಹ ಜಾತಿ ಅಥವಾ ಉಪಜಾತಿ ಮತ್ತು ಪಂಗಡಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 126 ಎಸ್‌ಎಡಿ 88 ದಿನಾಂಕ : 5-1-1991 ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯನ್ನು ಪುನರ್ ರಚನೆ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿವಿಧ ಜಾತಿ : ಪಂಗಡಗಳಿಂದ ಪರಿಶಿಷ್ಟ ಜಾತಿ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಕೋರಿಬಂದಿದ್ದ ಎಲ್ಲ ಅರ್ಜಿಗಳನ್ನು ಮೇಲಿನ ಸಮಿತಿಯ ಪರಿಶೀಲನೆಗೆ ಇಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ನರಸಣ್ಣ ಜಾತಿಯನ್ನು ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ ಜನಾಂಗದ ಪರ್ಯಾಯ ಜಾತಿಯೆಂದು ಪರಿಗಣಿಸಿ ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸದರಿ ಸಮಾಜದ ಅಧ್ಯಕ್ಷರಿಂದ ಮನವಿ ಬಂದಿದ್ದು ಅದನ್ನೂ ಸಹ ಮೇಲಿನ ಸಮಿತಿಯ ಪರಿಶೀಲನೆಗೆ ಕಳುಹಿಸಲಾಗಿದೆ. ಸದರಿ ಸಮಿತಿಯ ವರದಿ ಬಂದ ನಂತರ ಈ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

12.40 ಪಿ.ಎಂ.

(ಊ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲಾ ಹಿರೇಕೆರೂರ ತಾಲೂಕು ಕಡೂರ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಕಳೆದ ಒಂದು ತಿಂಗಳಿಂದ ಉಂಟಾಗಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಡೂರ ಗ್ರಾಮಸ್ಥರು ಮನವಿ ಸಲ್ಲಿಸಿದರೆ ಆ ಮನವಿ ಜಿಲ್ಲಾ ಪಂಚಾಯಿತಿ ಕಾರ್ಯಾಲಯದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ, ಜಿಲ್ಲಾಧಿಕಾರಿಗಳ ಕಚೇರಿಯಿಂದ ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ಓಡಾಡುತ್ತಾ ಇನ್ನುವರೆಗೆ ಏನೂ ಪರಿಹಾರ ಆಗಿರುವುದಿಲ್ಲ. ಕಾರಣ ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನ ಕಡೂರು ಗ್ರಾಮದ ಜನಸಂಖ್ಯೆ 3820 ಇರುತ್ತದೆ. ಈ ಗ್ರಾಮದಲ್ಲಿ ಸದ್ಯ ವಿದ್ಯುತ್ ಚಾಲಿತ ಎರಡು ಕೊಳವೆಬಾವಿಗಳು ಮತ್ತು ಎರಡು ಕೈಪಂಪು ಕೊಳವೆ ಬಾವಿಗಳು ಇರುತ್ತವೆ.

ಈ ಒಂದು ತಿಂಗಳಿನಿಂದ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗಿ ವಿದ್ಯುತ್ ನಿಲುಗಡೆ ಸಂದರ್ಭದಲ್ಲಿ ತೊಂದರೆ ಆಗಿರುತ್ತದೆ. ಒಂದು ವಿದ್ಯುತ್ ಚಾಲಿತ ಕೊಳವೆ ಬಾವಿಯಲ್ಲಿ ನೀರು ಉಪ್ಪಾಗಿದ್ದು ಕುಡಿಯಲು ಯೋಗ್ಯವಾಗಿರುವುದಿಲ್ಲ.

ಈ ಸದ್ಯ ಆ ಗ್ರಾಮದಲ್ಲಿ ಎರಡು ಕೈ ಪಂಪು ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿವೆ. ಸರಾಸರಿ ಪ್ರತಿಯೊಬ್ಬರಿಗೂ ದಿವಸಕ್ಕೆ 20 ಲೀಟರ್ ಕುಡಿಯುವ ನೀರು ಸರಬರಾಜು ಆಗುತ್ತಿದೆ.

ಈ ಗ್ರಾಮವು 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲೇ ಸೇರಿದ್ದು ಒಂದು ಕೊಳವೆ ಬಾವಿಯನ್ನು ಕೊರೆಯಿಸಲಾಗುತ್ತದೆ. ಈಗ ಇಲಾಖಾ ರಿಗ್ ಯಂತ್ರದಿಂದ ಒಂದು ಕೊಳವೆ ಬಾವಿಯನ್ನು ಒಂದು ವಾರದಲ್ಲಿ ಕೊರೆದು ಅಲ್ಲಿ ನೀರಿನ ಸಮಸ್ಯೆಯನ್ನು ಭಗೆಹರಿಸಲು ಕ್ರಮ ತೆಗೆದುಕೊಳ್ಳಲಾಗುವುದು.